# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1109
2. ಮಾನ್ಯ ಸದಸ್ಯರ ಹೆಸರು : ಶ್ರೀ ಮಧು.ಜಿ.ಮಾದೇಗೌಡ(ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 25.07.2024
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಕೃಷ್ಣ ರಾಜ ಸಾಗರ ಜಲಾಶಯದ ಸಮೀಪದಲ್ಲಿ "ಟ್ರಯಲ್ ಬ್ಲಾಸ್ಟ್" ನಡೆಸುವ ವಿಚಾರ ಪದೇ ಪದೇ ಮುನ್ನಲೆಗೆ ಬರುತ್ತಿರುವುದರಿಂದ ಸಾರ್ವಜನಿಕರಲ್ಲಿ ಆತಂಕ ಮತ್ತು ಗೊಂದಲಕ್ಕೆ ಕಾರಣವಾಗಿದೆ. ಹಾಗಾಗಿ, "ಟ್ರಯಲ್ ಬ್ಲಾಸ್ಟ್" ನಡೆಸುವುದರ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು: | ವೈಜ್ಞಾನಿಕ ಅಧ್ಯಯನ ಮತ್ತು ಸಂಶೋಧನೆ ನಡೆಸಿ ವರದಿಯನ್ನು ಪಡೆದು, ತದನಂತರ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು. |
| (ಆ) | ಘನ ನ್ಯಾಯಲಯವು "ಟ್ರಯಲ್ ಬ್ಲಾಸ್ಟ್" ನಡೆಸಿ ವರದಿ ನೀಡುವಂತೆ ನಿರ್ದೇಶನ / ಆದೇಶ ನೀಡಿರುವುದೇ ನಿಜವೇ: | ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:19835/2023 (ಶ್ರೀ ಸಿ.ಜಿ.ಕುಮಾರ್ V/s ಸ್ಟೇಟ್ ಆಫ್ ಕರ್ನಾಟಕ) ರ ಸಂಬಂಧ ದಿ:08-01-2024 ರಂದು ಜಾರಿ ಮಾಡಿರುವ ಮಧ್ಯಂತರ ಆದೇಶದಂತೆ, ಕೃಷ್ಣರಾಜಸಾಗರ ಅಣೆಕಟ್ಟೆಗೆ 20 ಕಿ.ಮೀ. ವ್ಯಾಪ್ತಿಯ ಪ್ರದೇಶದಲ್ಲಿನ ಸ್ಫೋಟಕ ಬಳಕೆ ಕಲ್ಲುಗಣಿಗಾರಿಕೆಯಿಂದ ಉಂಟಾಗುವ ಸಂಭವನೀಯ ಹಾನಿಯ ಬಗ್ಗೆ ವೈಜ್ಞಾನಿಕ ಅಧ್ಯಯನ ಮತ್ತು ಸಂಶೋಧನೆ ನಡೆಸಿ ವರದಿಯನ್ನು ಪಡೆದು, ಸದರಿ ವರದಿಯ ಮೇರೆಗೆ ರಾಜ್ಯ ಅಣೆಕಟ್ಟು ಸುರಕ್ಷತಾ ಸಮಿತಿ ಯಲ್ಲಿ ಚರ್ಚಿಸಿ ಗಣಿಗಾರಿಕೆಗೆ ನಿರ್ಬಂಧದ ವ್ಯಾಪ್ತಿಯ ಕುರಿತು ತೀರ್ಮಾನಿಸಬಹುದಾಗಿರುತ್ತದೆ ಎಂದು ನ್ಯಾಯಾಲಯವು ಆದೇಶಿಸಿರುತ್ತದೆ. |
| (ಇ) | ಕೃಷ್ಣ ರಾಜ ಸಾಗರ ಜಲಾಶಯ ಸುರಕ್ಷತೆ ದೃಷ್ಠಿಯಿಂದ ಸುತ್ತಲಿನ 20 ಕಿ.ಮೀ ವ್ಯಾಪ್ತಿಯಲ್ಲಿ ಗಣಿಗಾರಿಕೆಯನ್ನು ನಿಷೇಧಿಸಲಾಗಿದೆಯೇ ಅಥವಾ ನಿಷೇಧಿಸಲು ಸರ್ಕಾರ ಉದ್ದೇಶಿಸಿದೆಯೇ: | ಹೌದು ನಿಷೇಧಿಸಲಾಗಿದೆ |
| (ಈ) | "ಟ್ರಯಲ್ ಬ್ಲಾಸ್ಟ್" ಹಾಗೂ ಗಣಿಗಾರಿಕೆ ವಿಷಯದಲ್ಲಿ ತಾರ್ಕಿಕ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ? (ಸಂಪೂರ್ಣ ಮಾಹಿತಿ ನೀಡುವುದು) | ವೈಜ್ಞಾನಿಕ ಅಧ್ಯಯನ ಮತ್ತು ಸಂಶೋಧನೆ ನಡೆಸಿ ವರದಿಯನ್ನು ಪಡೆದು, ತದನಂತರ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು. |

**ಇ-ಜಸಂಇ 51 ಡಿಎಸ್ ಪಿ 2024**

(ಡಿ.ಕೆ. ಶಿವಕುಮಾರ್)
**ಮಾನ್ಯ ಉಪ ಮುಖ್ಯಮಂತ್ರಿಗಳು**